# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : **ಶ್ರೀ. ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 641

ಉತ್ತರ ದಿನಾಂಕ : 17.12.2021

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸುವ 'ಜಲ ಜೀವನ್ ಮಿಷನ್' ಯೋಜನೆಯ ಅನುಷ್ಠಾನವು ರಾಜ್ಯದಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಹಾಗಿದ್ದಲ್ಲಿ, ಮನೆ ಮನೆಗೆ ಶುದ್ಧ ಕುಡಿಯುವ ನೀರು ಒದಗಿಸುವ 'ಜಲ ಜೀವನ್ ಮಿಷನ್' ಯೋಜನೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | 'ಜಲ ಜೀವನ್ ಮಿಷನ್' ಯೋಜನೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದ್ದು, ರಾಜ್ಯದಲ್ಲಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ನಿರಂತರವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ. ಅಲ್ಲದೇ, ಪ್ರಗತಿಯ ಮೇಲ್ವಿಚಾರಣೆಗಾಗಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ (ಹೈ ಪವರ್ ಕಮಿಟಿ) ಯನ್ನು ರಚಿಸಲಾಗಿದೆ.<br><br>ಜಲ್ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಮಾರ್ಚ್ 2021 ರ ಅಂತ್ಯಕ್ಕೆ 28.15 ಲಕ್ಷಗಳ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸಲಾಗಿದ್ದು, 2021-22 ನೇ ಸಾಲಿನಲ್ಲಿ 25.17 ಲಕ್ಷ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕವನ್ನು ಒದಗಿಸುವ ಗುರಿ ಹೊಂದಲಾಗಿದೆ. ಈವರೆಗೆ (ದಿನಾಂಕ:13.12.2021 ರಂತೆ) 14.18 ಲಕ್ಷ ಮನೆಗಳಿಗೆ ನಳ |
| ಇ) | ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒದಗಿಸುವ ಅನುದಾನದ ಶೇಕಡವಾರು ಹಂಚಿಕೆಯೆಷ್ಟು; ಸದರಿ ಯೋಜನೆಗೆ ಈಗಾಗಲೇ ಎಷ್ಟು ಅನುದಾನ ಒದಗಿಸಲಾಗಿದೆ; (ತಾಲ್ಲೂಕುವಾರು ವಿವರ ಒದಗಿಸುವುದು) | ಜಲ ಜೀವನ್ ಮಿಷನ್ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ 50:50 ರ ಅನುಪಾತದಲ್ಲಿ ಒದಗಿಸಲಾಗುತ್ತಿದೆ. ಸದರಿ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡುತ್ತಿರುವುದಿಲ್ಲ ಬದಲಾಗಿ ವಿಭಾಗವಾರು ಬಿಡುಗಡೆ ಮಾಡಲಾಗುತ್ತದ್ದು, ಪ್ರಸ್ತುತ ವರ್ಷದಲ್ಲಿ ಇಲ್ಲಿಯವರೆಗೆ ಒದಗಿಸಲಾದ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |

| | | |
|---|---|---|
| ಈ) | ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ 'ಜಲ ಜೀವನ್ ಮಿಷನ್' ಯೋಜನೆಯ ಅನುಷ್ಠಾನದ ಕುರಿತು ಇರುವ ಮಾನದಂಡಗಳೇನು; (ಯೋಜನೆಯ ರೂಪ-ರೇಷೆಗಳ ವಿವರ ಒದಗಿಸುವುದು) | ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ "ಜಲ ಜೀವನ ಮಿಷನ್" ಯೋಜನೆಯನ್ನು ಅನುಷ್ಠಾನಗೊಳಿಸಲು ಇರುವ ರೂಪರೇಷಗಳು;<br>1. ಗ್ರಾಮೀಣ ಕುಟುಂಬಗಳ ಪ್ರತಿ ವ್ಯಕ್ತಿಗೆ ಪ್ರತಿ ದಿನ 55 LPCD ಯಂತೆ ಕ್ರಿಯಾತ್ಮಕ ನಳ ನೀರು ಸಂಪರ್ಕ (Functional Household Tap Connection) ಒದಗಿಸುವುದು.<br>2. ಶಾಲೆ, ಅಂಗನವಾಡಿ ಕೇಂದ್ರಗಳು, ಗ್ರಾಮ ಪಂಚಾಯತ್ ಕಟ್ಟಡಗಳು, ಆರೋಗ್ಯ ಕೇಂದ್ರಗಳು, ಪೋಷ್ಠಿಕ (Wellness) ಕೇಂದ್ರಗಳು ಮತ್ತು ಸಮುದಾಯ ಕಟ್ಟಡಗಳಿಗೆ ನಳ ನೀರು ಸಂಪರ್ಕವನ್ನು ಒದಗಿಸುವುದು.<br>3. ನಳ ಸಂಪರ್ಕಗಳ ಕಾರ್ಯವನ್ನು ಮೇಲ್ವೀಚಾರಣೆ ಮಾಡುವುದು.<br>4. ಸಮುದಾಯದಲ್ಲಿ ಸ್ವಯಂಪ್ರೇರಿತ ಸ್ಥಳೀಯ ಮಾಲೀಕತ್ವವನ್ನು ಉತ್ತೇಜಿಸಲು & ನಗದು ರೀತಿಯ/ ಅಥವಾ ಸ್ವಯಂಪ್ರೇರಿತ ಕಾರ್ಮಿಕರ ಶ್ರಮದಾನದ ಕೊಡುಗೆಯ ಖಚಿತಪಡಿಸುವುದು.<br>5. ನೀರು ಸರಬರಾಜು ವ್ಯವಸ್ಥೆಯನ್ನು ಸುಸ್ಥಿರಗೊಳಿಸಲು ಅಂದರೆ ನೀರಿನ ಮೂಲ, ನೀರು ಸರಬರಾಜು ಮೂಲಸೌಕರ್ಯ ಮತ್ತು ನಿಯಮಿತ ಕಾರ್ಯಾಚರಣೆ & ನಿರ್ವಹಣೆಯಗಾಗಿ ಸಮುದಾಯದ ವಂತಿಕೆ ಸಂಗ್ರಹಿಸುವುದು.<br>6. ಆದ್ಯತೆ ಮೇಲೆ ಕುಡಿಯುವ ನೀರಿನ ಗುಣಮಟ್ಟವನ್ನು ಆಧರಿಸಿ ಅಂತಹ ಪ್ರದೇಶಗಳಲ್ಲಿ, ಬರಪೀಡಿತ ಪ್ರದೇಶಗಳಲ್ಲಿ, ಸಂಸದರ ಆದರ್ಶ ಗ್ರಾಮ ಯೋಜನೆಯಲ್ಲಿನ ಮನೆಗಳಿಗೆ ನಳಗಳನ್ನು ಕಲ್ಪಿಸುವುದು.<br>7. ಕಲ್ಪಿಸಲಾಗಿರುವ ನಳಗಳಲ್ಲಿ ಕುಡಿಯುವ ನೀರು ಸರಬರಾಜಿನ ಬಗ್ಗೆ ಖಚಿತ ಪಡಿಸಿಕೊಳ್ಳುವುದು.<br>8. ಸುಸ್ಥಿರ ಕುಡಿಯುವ ನೀರು ವ್ಯವಸ್ಥೆ ಅಂದರೆ ನೀರಿನ ಮೂಲ, ಸರಬರಾಜಿನ ವ್ಯವಸ್ಥೆ ಮತ್ತು ನಿರ್ವಹಣೆಗೆ ಧನಮೂಲದ ಸಂಯೋಜನೆ.<br>9. ಈ ವ್ಯವಸ್ಥೆಗೆ ಬೇಕಾಗುವ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವುದು. ಇವುಗಳಲ್ಲಿ ಕಟ್ಟಡ ಕಾಮಗಾರಿ, ಕೊಳವೆ ಕೆಲಸ, ವಿದ್ಯುಚ್ಛಕ್ತಿ ಕಾಮಗಾರಿ, ನೀರಿನ ಗುಣ ನಿರ್ವಹಣೆಗೆ, ನೀರಿನ ಸಂಸ್ಕರಣೆ, ಜಲಮೂಲದ ಜಲಾನಯನ ರಕ್ಷಣೆ, ನೀರು ಸರಬರಾಜು |

| | | |
|---|---|---|
| ಉ) | ಈಗಾಗಲೇ ಸದರಿ ಯೋಜನೆಯು ಎಷ್ಟು ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗಿದೆ; (ವಿವರ ಒದಗಿಸುವುದು) | ವಿವರವನ್ನು ಅನುಬಂಧ-**2** ರಲ್ಲಿ ಲಗತ್ತಿಸಿದೆ. |
| ಊ) | ಯಾವ ಕಾಲಮಿತಿಯಲ್ಲಿ ಸದರಿ ಯೋಜನೆಯಡಿ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸುವ ಕಾರ್ಯ ಪೂರ್ಣಗೊಳ್ಳುವುದು? | ಜಲ ಜೀವನ್ ಮಿಷನ್ ಯೋಜನೆಯನ್ನು ರಾಜ್ಯದಲ್ಲಿ 2024 ರೊಳಗಾಗಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. |

ಸಂ:ಗ್ರಾಕುನೀ&ನೈಇ 316 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಚುಕ್ಕೆ ರಹಿತ ಪ್ರಶ್ನೆ ಸಂ: 6418 ಲಗತ್ತು

ಅನುಬಂಧ-01

# ಜಲ ಜೀವನ್ ಮಿಷನ್ ಯೋಜನೆಯಡಿ 2021-22 ನೇ (ನವೆಂಬರ್-21) ಸಾಲಿನಲ್ಲಿ ಬಿಡುಗಡೆಮಾಡಲಾದ ಅನುದಾನದ ಜಿಲ್ಲಾವರು ವಿವರ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆ | ಬಿಡುಗಡೆಮಾಡಲಾದ ಅನುದಾನ |
|---|---|---|
| 1 | ಬಾಗಲಕೋಟೆ | 8462.08 |
| 2 | ಬೆಂಗಳೂರು(ಗ್ರಾ) | 1357.37 |
| 3 | ಬೆಂಗಳೂರು (ನ) | 432.02 |
| 4 | ಬೆಳಗಾವಿ | 24248.86 |
| 5 | ಬಳ್ಳಾರಿ | 12689.18 |
| 6 | ಬೀದರ್ | 3755.83 |
| 7 | ಬಿಜಾಪುರ | 10046.22 |
| 8 | ಚಾಮರಾಜನಗರ | 13372.77 |
| 9 | ಚಿಕ್ಕಬಳ್ಳಾಪುರ | 1460.18 |
| 10 | ಚಿಕ್ಕಮಗಳೂರು | 2718.54 |
| 11 | ಚಿತ್ರದುರ್ಗ | 16163.29 |
| 12 | ದಕ್ಷಿಣ ಕನ್ನಡ | 4740.67 |
| 13 | ದಾವಣಗೆರೆ | 5856.87 |
| 14 | ಧಾರವಾಡ | 8122.60 |
| 15 | ಗದಗ | 12236.40 |
| 16 | ಕಲಬುರಗಿ | 5360.93 |
| 17 | ಹಾಸನ | 14163.49 |
| 18 | ಹಾವೇರಿ | 11530.31 |
| 19 | ಕೊಡಗು | 3204.30 |
| 20 | ಕೋಲಾರ | 949.01 |
| 21 | ಕೊಪ್ಪಳ | 7955.46 |
| 22 | ಮಂಡ್ಯ | 9336.13 |
| 23 | ಮೈಸೂರು | 10597.27 |
| 24 | ರಾಯಚೂರು | 7624.91 |
| 25 | ರಾಮನಗರ | 5780.38 |
| 26 | ಶಿವಮೊಗ್ಗ | 7171.92 |
| 27 | ತುಮಕೂರು | 7483.39 |
| 28 | ಉಡುಪಿ | 3218.86 |
| 29 | ಉತ್ತರ ಕನ್ನಡ | 7634.65 |
| 30 | ಯಾದಗಿರಿ | 3742.85 |
| | ಒಟ್ಟು | **231416.74** |

ಮುಖ್ಯ ಲೆಕ್ಕಾಧಿಕಾರಿಗಳು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 641ರ ಲಗತ್ತು

ಅನುಬಂಧ-2

| ಕ್ರ.ಸಂ | ಜಿಲ್ಲೆಗಳು | No. of Har Ghar Jal Block | No. of Har Ghar Jal Panchayat | No. of Har Ghar Jal Village |
|---|---|---|---|---|
| 1 | ಬಾಗಲಕೋಟೆ | 0 | 2 | 58 |
| 2 | ಬಳ್ಳಾರಿ | 0 | 6 | 24 |
| 3 | ಬೆಂಗಳೂರು ಗ್ರಾಮಾಂತರ | 0 | 0 | 0 |
| 4 | ಬೆಳಗಾವಿ | 0 | 9 | 98 |
| 5 | ಬೆಂಗಳೂರು ನಗರ | 0 | 0 | 0 |
| 6 | ಬೀದರ್ | 0 | 0 | 11 |
| 7 | ಚಾಮರಾಜನಗರ | 0 | 5 | 133 |
| 8 | ಚಿಕ್ಕಬಳ್ಳಾಪುರ | 0 | 0 | 5 |
| 9 | ಚಿಕ್ಕಮಗಳೂರು | 0 | 1 | 75 |
| 10 | ಚಿತ್ರದುರ್ಗ | 0 | 0 | 96 |
| 11 | ದಕ್ಷಿಣ ಕನ್ನಡ | 0 | 1 | 7 |
| 12 | ದಾವಣಗೆರೆ | 0 | 44 | 218 |
| 13 | ಧಾರವಾಡ | 0 | 14 | 73 |
| 14 | ಗದಗ | 0 | 36 | 123 |
| 15 | ಹಾಸನ | 0 | 10 | 237 |
| 16 | ಹಾವೇರಿ | 0 | 7 | 114 |
| 17 | ಕಲಬುರಗಿ | 0 | 0 | 17 |
| 18 | ಕೊಡಗು | 0 | 0 | 19 |
| 19 | ಕೋಲಾರ | 0 | 0 | 10 |
| 20 | ಕೊಪ್ಪಳ | 0 | 1 | 78 |
| 21 | ಮಂಡ್ಯ | 0 | 2 | 108 |
| 22 | ಮೈಸೂರು | 0 | 0 | 65 |
| 23 | ರಾಯಚೂರು | 0 | 0 | 64 |
| 24 | ರಾಮನಗರ | 0 | 5 | 121 |
| 25 | ಶಿವಮೊಗ್ಗ | 0 | 15 | 237 |
| 26 | ತುಮಕೂರು | 0 | 0 | 31 |
| 27 | ಉಡುಪಿ | 0 | 3 | 3 |
| 28 | ಉತ್ತರ ಕನ್ನಡ | 0 | 1 | 82 |
| 29 | ವಿಜಯನಗರ | 0 | 3 | 51 |
| 30 | ಯಾದಗಿರಿ | 0 | 0 | 9 |
| | ಒಟ್ಟು | **0** | **165** | **2167** |